## ಚೆಕ್‌ಬುಕ್

ಐಫೋನ್‌ನ ಈ ಆ್ಯಪ್ ನಿಮ್ಮ ವೈಯಕ್ತಿಕ ಹಣಕಾಸು ವ್ಯವಹಾರಗಳನ್ನು ನಿಭಾಯಿಸುತ್ತದೆ. ವಿವಿಧ ಹಣಕಾಸು ಖಾತೆಗಳನ್ನು ಸಮನ್ವಯಗೊಳಿಸುತ್ತದೆ. ನಿಮ್ಮ ಆದಾಯ ಮತ್ತು ಖರ್ಚುಗಳ ಮೇಲೆ ಕಣ್ಣಿಡುತ್ತದೆ. ಇದಕ್ಕಾಗಿ ನೀವು ಪ್ರತ್ಯೇಕ ಖಾತೆಗೆ ಸಹಿ ಮಾಡಬೇಕಾಗಿಲ್ಲ. ನೀವೇ ಅಂಕಿ– ಸಂಖ್ಯೆ ನಮೂದಿಸಿ ಹಣ ಸಂದಾಯ ಅಥವಾ ಖರ್ಚಿನ ಮಾಹಿತಿ ಇಟ್ಟುಕೊಳ್ಳಬಹುದು. ಇದರಲ್ಲಿ ವಿಶೇಷ ಬಜೆಟ್ ಅಥವಾ ಹಣ ಉಳಿತಾಯದ ಯೋಜನೆಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಎಲೆಕ್ಟ್ರಾನಿಕ್ ಚೆಕ್‌ಬುಕ್ ಲೆಡ್ಜರ್ ತರಹ ಕೆಲಸ ಮಾಡುತ್ತದೆ.






## ಎವಿಜಿ ಆ್ಯಂಟಿವೈರಸ್ ಸೆಕ್ಯುರಿಟಿ 4

ಆ್ಯಂಡ್ರಾಯ್ಡ್‌ನ ಈ ಉಚಿತ ಆ್ಯಪ್ ನಿಮಗೆ ಸಾಕಷ್ಟು ಆನ್‌ಲೈನ್ ಭದ್ರತೆ ನೀಡುತ್ತದೆ. ನಿಮ್ಮ ಖಾಸಗೀತನವನ್ನು ಸುಧಾರಿಸಿ, ನಿಮ್ಮ ಆ್ಯಂಡ್ರಾಯ್ಡ್ ಸುಲಲಿತವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಅಪಾಯಕಾರಿ ಎನ್ನುವಂತಹ ಎಸ್‌ಎಂಎಸ್‌ಗಳನ್ನು ಪರಿಶೀಲಿಸುತ್ತದೆ. ಕಳ್ಳತನದಿಂದ ಇಣುಕಿ ಹಾಕುವ ಹ್ಯಾಕರ್‌ಗಳ ವಿರುದ್ಧ ಭದ್ರತೆ ಒದಗಿಸುತ್ತದೆ. ಅಂಕಿ– ಅಂಶಗಳನ್ನು ಬಳಸಬಹುದಾದ ಮಾನಿಟರ್ ಸೌಲಭ್ಯವಿದೆ. ಆ್ಯಪ್ ಲಾಕ್, ಆ್ಯಪ್ ಬ್ಯಾಕ್‌ಅಪ್, ಕ್ಯಾಮೆರಾ ಟ್ರಾಪ್, ಡಿವೈಸ್ ಲಾಕ್ ಮೊದಲಾದ ಪರಿಕರಗಳಿದ್ದು, ಮೂಲ ಆ್ಯಪ್ ಉಚಿತ. ಉಳಿದ ಟೂಲ್‌ಗಳನ್ನು 14 ದಿನಗಳ ಕಾಲ ಉಚಿತವಾಗಿ ಬಳಸಿ ನಂತರ ಶುಲ್ಕ ನೀಡಬೇಕಾಗುತ್ತದೆ.

## ವಿಕರ್

ಭಾರಿ ಭದ್ರತೆ ಕೇಳುವ ಸಂದೇಶಗಳನ್ನು ಕಳಿಸಲು ಈ ಆ್ಯಂಡ್ರಾಯ್ಡ್ ಆ್ಯಪ್ ಸಹಕಾರಿ. ಬೇರೆ ಬಳಕೆದಾರರನ್ನು ಹುಡುಕಲು ಭದ್ರತಾ ವ್ಯವಸ್ಥೆಯಿದೆ. ಗ್ರೂಪ್ ಸಂದೇಶ ಕಳಿಸಬಹುದು. ಫೋಟೊ ಎಡಿಟಿಂಗ್ ಸೌಲಭ್ಯವಿದೆ. ಸಾಮಾಜಿಕ ಜಾಲತಾಣದಲ್ಲೂ ಸಂದೇಶಗಳನ್ನು ಕಳಿಸಬಹುದು. ಸೈಬರ್ ಅಪರಾಧಗಳು ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಹೆಚ್ಚಿನ ಬಳಕೆದಾರರು ತಮ್ಮ ಸಂದೇಶಗಳ ಭದ್ರತೆಯ ಬಗ್ಗೆ ಆತಂಕಿತರಾಗುವುದು ಸಹಜ. ಹೀಗಾಗಿ ಸಂವಹನದ ಮೂಲಗಳನ್ನು ಆಗಾಗ ಬದಲಾಯಿಸುವುದು ಮಾಮೂಲಾಗಿದೆ. ಅಂಥವರಿಗೆ ಆ್ಯಂಡ್ರಾಯ್ಡ್‌ನ ಈ ಸಂದೇಶವಾಹಕ ಅನುಕೂಲಕರ.




## ಸ್ಲಿಂಗ್‌ಶಾಟ್

ಇದು ಫೋಟೊ ಹಾಗೂ ವಿಡಿಯೊ ಹಂಚಿಕೊಳ್ಳುವ ಆ್ಯಪ್. ಆದರೆ ನೀವು ಹಂಚಿಕೊಳ್ಳಬಹುದಾದ ಫೋಟೊ ಮತ್ತು ವಿಡಿಯೋಗಳನ್ನು ಇದು ಕಾಪಿಟ್ಟುಕೊಳ್ಳುವುದಿಲ್ಲ. ನೀವು ತೆಗೆದ ಅಥವಾ ನಿಮಗೆ ಬಂದ ಫೋಟೋಗಳನ್ನು ಉಳಿಸಿಕೊಳ್ಳಲು ಅನ್‌ಲಾಕ್ ಮಾಡಬೇಕಾಗುತ್ತದೆ. ಮೊಬೈಲ್‌ನಲ್ಲಿ ಫೋಟೊ ತೆಗೆದ ನಂತರ ಅದರ ಗಾತ್ರವನ್ನು ಹೆಚ್ಚು ಕಡಿಮೆ ಮಾಡಬಹುದು, ಬಣ್ಣ ತುಂಬಬಹುದು. ಇಮೇಜ್‌ಗೆ ಬರಹ ಸೇರಿಸಬಹುದು. ನಂತರ ಸ್ಲಿಂಗ್ ಬಟನ್ ಒತ್ತಿದರೆ ಫೋಟೊ ಅಥವಾ ವಿಡಿಯೋವನ್ನು ನಿಮ್ಮ ಸ್ನೇಹಿತರ ಬಳಗಕ್ಕೆ ಕಳಿಸಬಹುದು.




■ ಎಸ್. ತುಂಬೆ